ಕೆ.ಮೈಥಿಲಿಕೃಷ್ಣ, ಬೆಂಗಳೂರು

*ತಿಥಿ ಊಟ ಅಂದ್ಕೂಡ್ಲೆ ಥಟ್ಟನೆ ಹೊಳೆಯುವುದು ಯಾವುದು?*



ನುಣ್ಣನುಣುಪಾಗಿರುವ ವೈದಿಕ ಮಾಡಿಸುವವರ ತಲೆ!

ಪಿ.ಜಿ. ರಾಘವೇಂದ್ರ, ಮೈಸೂರು

*ಅನಾಥಾಶ್ರಮಕ್ಕೂ, ವೃದ್ಧಾಶ್ರಮಕ್ಕೂ ಏನು ವ್ಯತ್ಯಾಸ?*

ಮಾನವೀಯತೆಯ ಒರತೆಯಿಂದ ಅನಾಥಾಶ್ರಮ; ಮಾನವೀಯತೆಯ ಕೊರತೆಯಿಂದ ವೃದ್ಧಾಶ್ರಮ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಮಾತಿನ ಕೊರೆತಕ್ಕಿಂತ ಚಳಿಯ ಕೊರೆತವೇ ಲೇಸು ಎಂದು ಇಲ್ಲೊಬ್ಬ ಹೇಳುವುದರ ಮರ್ಮ?*

ಚಳಿ ದೇಹವನ್ನು ಮಾತ್ರ ನಡುಗಿಸುತ್ತದೆ; ಮಾತಿನ ಕೊರೆತ ಮನಸ್ಸು, ಬುದ್ಧಿ, ದೇಹ ಎಲ್ಲವನ್ನೂ ನಡುಗಿಸಿಬಿಡುತ್ತದೆ.

ಜಾಕೋಬ್ ಡಿಸೋಜ, ಕುರುವಳ್ಳಿ

*ಕುತೂಹಲ ಮತ್ತು ಹೆದರಿಕೆ ಯಾವಾಗ ಬರುತ್ತದೆ?*



ಸುಂದರಿಯನ್ನು ಕಂಡಾಗ ಕುತೂಹಲ, ಅವಳ ಧಡಿಯ ಅಣ್ಣನನ್ನು ಕಂಡಾಗ ಹೆದರಿಕೆ!

ಎನ್. ಗೋಪಾಲರಾವ್, ಬೆಂಗಳೂರು

*ಪತ್ನಿಯು ಪತಿಯೇ ಪರದೈವ ಎಂದು ಹೇಳುವುದು ನಂಬಿಕೆಯೋ, ಮೂಢನಂಬಿಕೆಯೋ?*

ಎರಡೂ ಅಲ್ಲ, ಪತಿಯನ್ನು ಉಬ್ಬಿಸಿ ಕಂಟ್ರೋಲ್‌ನಲ್ಲಿಟ್ಟುಕೊಳ್ಳುವ ಸೂಪರ್ ಪ್ಲ್ಯಾನ್.

ಎಚ್.ಆರ್. ದೇಸಾಯಿ, ರಾಯಚೂರು

*ಈ ಗಲೀಜು ಶರೀರದಲ್ಲಿ ಆತ್ಮದ ಸ್ಥಾನವೆಲ್ಲಿ? ಮನಸ್ಸಿನ ಸ್ಥಾನವೆಲ್ಲಿ?*

ಆತ್ಮದ ಸ್ಥಾನ ಮನಸ್ಸಿನಲ್ಲಿ, ಮನಸ್ಸಿನ ಸ್ಥಾನ ವಿವೇಕದಲ್ಲಿ!

ಎಂ.ಜಿ. ಶಿವರಾಂ, ಬೆಂಗಳೂರು

*ರಾಮಾಯ ಸ್ವಸ್ತಿ ಎಂದರೆ ಪ್ರತಿಭಟಿಸುತ್ತಾರೆ. ರಾವಣಾಯ ಸ್ವಸ್ತಿ ಎಂದರೂ ಪ್ರತಿಭಟಿಸುತ್ತಾರೆ. ನಿಜವಾದ ಸ್ವಸ್ತಿ ಎಲ್ಲಿದೆ?*

ಹೋಲ್‌ಸೇಲಾಗಿ 'ರಾಮಾಯಣಾಯ ಸ್ವಸ್ತಿ' ಎಂದುಬಿಡಿ. ರೀಟೈಲ್ ಗಲಾಟೆಯೇ ತಪ್ಪಿಬಿಡುತ್ತದೆ.

ವಿಭಾ ಜಿ. ಮೈಸೂರು

*ಶ್ರದ್ಧೆ, ಪ್ರತಿಭೆ, ಮತ್ತು ಗುರಿ; ಇವುಗಳಲ್ಲಿ ಮುಖ್ಯವಾದದ್ದು ಯಾವುದು?*

ನಮ್ಮ ದೇಶದಲ್ಲಿ ಈ ಮೂರೂ ಮುಖ್ಯವಲ್ಲ; ಜಾತಿ, ವಶೀಲಿ, ಹಣ ಇದ್ದೊಡೆ ಮಿನಿಸ್ಟ್ರಿಗೇ ಕೈಯ ಹಚ್ಚೆಂದ ಸರ್ವಜ್ಞ!

ಪೇಂಟರ್ ಪಾಪು, ಸಂತೇಮರಹಳ್ಳಿ

*ಧಾರಾವಾಹಿಗಳಲ್ಲಿ ಒಂದು ಬೆಂಕಿಪೊಟ್ಟಣ ಹಚ್ಚುವುದಕ್ಕೆ ಅರ್ಧ ಗಂಟೆ ತೆಗೆದುಕೊಳ್ಳುತ್ತಾರೆ?*

ಗೋಳಿನ ಧಾರಾವಾಹಿಗಳಲ್ಲವೇ! ಬೆಂಕಿಪೊಟ್ಟಣ ಕಣ್ಣೀರಿನಲ್ಲಿ ಒದ್ದೆ ಆಗಿರುವುದರಿಂದ ಹತ್ತುವುದು ನಿಧಾನ!

ಕುಮಾರ ಚಲವಾದಿ, ಹೊಳೆನರಸಿಪುರ

*ಹೆಂಡತಿಗೆ ತಿಳಿಯದಂತೆ ಪ್ರೇಯಸಿಯನ್ನು ಒಲಿಸಿಕೊಳ್ಳುವುದು ಹೇಗೆ?*

ಸಾಧ್ಯವಿಲ್ಲ ಬಿಡಿ; ಹೆಂಡತಿಯ ಮೂಗು ಯಾವುದೇ ಪೊಲೀಸ್ ನಾಯಿಯ ಮೂಗಿಗಿಂತಲೂ ಚುರುಕು!

ಜಯರಾಮ್, ನೆಲಮಂಗಲ

*ಮುಂದೊಂದು ದಿನ ಪುಸ್ತಕಗಳಂತೆ ಮನುಷ್ಯರನ್ನೂ ಕೆ.ಜಿ.ಲೆಕ್ಕದಲ್ಲಿ ಮಾರುವ ಸಾಧ್ಯತೆಗಳಿವೆಯೆ ಸಾರ್?*

ಇಲ್ಲ; ಮನುಷ್ಯನ ಬೆಲೆ ಎಂದಿಗೂ ರದ್ದಿಗಿಂತಲೂ ಕಡಿಮೆಯಾದ್ದರಿಂದ ಗಿಟ್ಟಲ್ಲ!

ಡಾ. ಪುಗಳೇಂದಿ, ಸಿರುಗುಪ್ಪ

*ಮನೆಗೆ ಅತಿಥಿಗಳು ಆಗಮಿಸಿದರೂ ಲಕ್ಷಿಸದೆ ಟಿವಿ ಧಾರಾವಾಹಿ ವೀಕ್ಷಿಸುವ ಹೆಂಗಸರನ್ನು ತಿದ್ದುವುದು ಹೇಗೆ?*

ಅತಿಥಿಗಳನ್ನು ಟಿವಿ ಮತ್ತು ಆಕೆಯ ಮಧ್ಯದಲ್ಲಿ ಕೂಡಿಸಿ; ಖಂಡಿತ ಲಕ್ಷಿಸುತ್ತಾರೆ.

## ಬಹುಮಾನಿತ ಪ್ರಶ್ನೆ

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ನಡೆಯುವವರು ಎಡವುವುದು ಸಹಜ. ಆದರೆ ಪದೇಪದೇ ಎಡವುವವರು ಸರಿಯಾಗಿ ನಡೆಯುವುದು ಯಾವಾಗ?*

ನೇತ್ರವೈದ್ಯ ಅವರ ದೃಷ್ಟಿದೋಷಕ್ಕೆ ಹೊಂದುವ ಸರಿಯಾದ ಪವರ್ ಇರುವ ಕನ್ನಡಕ ಕೊಟ್ಟಾಗ!

ಶಿವಕುಮಾರ, ಶೋರಾಪೂರ

*ಸ್ವರ್ಗಕ್ಕೆ ಎಷ್ಟು ಮೆಟ್ಟಿಲು?*

ಎಣಿಸಿಕೊಂಡು ಹೋಗಿ – ಒಂದ, ಎರಡ, ಮೂರ, ನಾಕ! ನಾಲ್ಕನೆಯ ಮೆಟ್ಟಿಲಲ್ಲೇ ಸ್ವರ್ಗ!

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ

*ಪೊರೆಯುವ ದೇವರೇ ಶತೃವಾದರೆ ಮುಂದಿನ ಗತಿ ಏನು?*

ನಿಮ್ಮ ಭಕ್ತಿಯ ಪವರ್ ಹೆಚ್ಚಿಸಿಕೊಳ್ಳಿ; ದೇವ ಕಡುಭಕ್ತನ ಗುಲಾಮ!

ಎಂ.ಎಸ್. ಸೋಮಶೇಖರ್, ಮೈಸೂರು

*ಬೊಗಳುವ ನಾಯಿ ಕಚ್ಚುವುದಿಲ್ಲ, ಕಚ್ಚುವ ನಾಯಿ ಬೊಗಳುವುದಿಲ್ಲ – ಇದು ಯಾವ ಸಿದ್ಧಾಂತ?*



ಬೊಗಳೆ ಸಿದ್ಧಾಂತ.

ಎಚ್. ಸಿದ್ಧಾರ್ಥ ಹೆಬ್ಬಾರ್, ಈದು

*ಭಕ್ತಿಮಿಶ್ರಿತ ಪ್ರೀತಿ ಹೇಗಿರುತ್ತದೆ?*

ಭಕ್ತಿ ಕುರುಡು; ಪ್ರೀತಿಯೂ ಕುರುಡು; – X – = + ನಿಯಮದಂತೆ ಎರಡು ಕುರುಡು ಸೇರಿ ಒಂದು ಉಜ್ವಲ ಬೆಳಕು!

ರಮಾನಂದ ಶರ್ಮ, ಬೆಂಗಳೂರು

*ನೀವು ಕೇಳಿದಿರಿ ಪುಟದಲ್ಲಿ ಕೆಲವರಿಗೆ ಮೀಸಲಾತಿ ಇದೆಯಂತೆ?*

ನಿಜ. ಮೀ – ಮೀಮಾಂಸೆ, ಸ – ಸದಭಿರುಚಿ, ಲಾ – ಲಾಜಿಕ್, ತಿ – ತಿಳಿಹಾಸ್ಯ, ಇವಕ್ಕೆ ಆದ್ಯತೆ ನೀಡುವವರಿಗೆ.

ರಾಮ್